UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Thursday
24-09-2026

Prajavani pg 05

'ಜಿಕೆವಿಕೆ ಬಯೊಟೆಕ್ ಪಾರ್ಕ್ ಹೋರಾಟದ 25 ವರ್ಷಗಳು' ಕಾರ್ಯಕ್ರಮ: ಉದ್ಘಾಟನೆ: ಸಿ.ನಾರಾಯಣ ಸ್ವಾಮಿ, ಅಧ್ಯಕ್ಷತೆ: ಕೆ.ನಾರಾಯಣಗೌಡ, ಆಯೋಜನೆ: ಕರ್ನಾಟಕ ಕೃಷಿ ಮತ್ತು ಸಂಬಂಧಿಸಿದ ವಿಶ್ವವಿದ್ಯಾಲಯಗಳ ನಿವೃತ್ತ ಪ್ರಾಧ್ಯಾಪಕರು, ವಿಜ್ಞಾನಿಗಳು ಹಾಗೂ ಹಳೆಯ ವಿದ್ಯಾರ್ಥಿಗಳ ವೇದಿಕೆ, ಸ್ಥಳ: ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 10.30

Viswavani pg 06

ಕೃಷಿ ಕ್ಷೇತ್ರದ ಕುತೂಹಲಗಳ ಅನಾವರಣಕ್ಕೆ ವೇದಿಕೆ ಸಿದ್ಧ

ಅ.16ರಿಂದ 18ರವರೆಗೆ ಹಲವು ವೈಶಿಷ್ಟ್ಯಗಳ ರೈತ ದಸರಾ । ಕೃಷಿ ಕ್ಷೇತ್ರದ ಹೊಸ ಹೆಜ್ಜೆಗಳಿಗೆ ಸಾಕ್ಷಿಯಾಗಲಿದೆ ಜೆ.ಕೆ. ಮೈದಾನ

ಏ ಕೆ.ಜೆ.ಲೋಕೇಶ್ ಬಾಬು ಮೈಸೂರು

ಈ ಬಾರಿ ಮೈಸೂರಿನ ದಸರಾ ಅಂಗಳದಲ್ಲಿ ಮಣ್ಣಿನ ವಾಸನೆಯೂ ಗಟ್ಟಿಯಾಗಿ ಪಸರಿಸಲಿದೆ. ಹೊಲದಲ್ಲಿ ಬೆವರು ಸುರಿಸುವ ರೈತನೇ ವೇದಿಕೆಯ ಮೇಲೆ ನಿಂತು ತನ್ನ ಕೃಷಿ ಅನುಭವವನ್ನು ಹೇಳಲಿದ್ದಾನೆ. ವಿಜ್ಞಾನಿಗಳ ಉಪನ್ಯಾಸದ ಬದಲಿಗೆ ರೈತರ ಬದುಕಿನ ಪಾಠ ಕೇಳಿಸಲಿದೆ.

ಹೌದು..! ಅ.16ರಿಂದ 18ರವರೆಗೆ ಜೆ.ಕೆ. ಮೈದಾನದಲ್ಲಿ ನಡೆಯಲಿರುವ ರೈತ (ಗ್ರಾಮೀಣ) ದಸರಾ ಈ ಬಾರಿ ಇಂತಹ ಹಲವು ವೈಶಿಷ್ಟ್ಯಗಳೊಂದಿಗೆ ಗಮನ ಸೆಳೆಯಲಿದೆ. ಈ ಬಾರಿ ರೈತ ದಸರೆಯ ವಿಶೇಷತೆ ಬಗ್ಗೆ ಒಂದೇ ಸಾಲಿನಲ್ಲಿ ಹೇಳಬೇಕೆಂದರೆ, ರೈತನಿಗಾಗಿ ಕಾರ್ಯಕ್ರಮವಲ್ಲ; ರೈತನ್ನೇ ಕಾರ್ಯಕ್ರಮದ ಕೇಂದ್ರವಾಗಿಸುವ ಪ್ರಯತ್ನ ನಡೆದಿದೆ.

ಹೊಲದಲ್ಲಿ ದುಡಿಯುವ ಕೈಗಳ ಅನುಭವವೇ ವೇದಿಕೆಯ ಮಾತಾಗಲಿದೆ. ಎತ್ತುಬಂಡಿಯ ಪಕ್ಕದಲ್ಲೇ ಅತ್ಯಾಧುನಿಕ ಯಂತ್ರ ನಿಲ್ಲಲಿದೆ. ಕೈಯಲ್ಲಿ ಹಾಲು ಕರೆಯುವ ಅನುಭವದ ಜತೆಗೆ ಯಂತ್ರದ ವೇಗವೂ ಕಾಣಿಸಲಿದೆ. ನಾಟಿ ತಳಿಗಳ ಜತೆಗೆ ಆಧುನಿಕ ತಂತ್ರಜ್ಞಾನದ ಪರಿಚಯವೂ ಆಗಲಿದೆ. ಹೀಗಾಗಿ ಜೆ.ಕೆ. ಮೈದಾನದಲ್ಲಿ ನಡೆಯಲಿರುವ ರೈತ ದಸರಾ, ಮಣ್ಣಿನ ಸಂಸ್ಕೃತಿ ಮತ್ತು ತಂತ್ರಜ್ಞಾನದ ಹೆಜ್ಜೆಗಳನ್ನು ಒಂದೇ ವೇದಿಕೆಯಲ್ಲಿ ಮುಖಾಮುಖಿಯಾಗಿಸುವ ಕೃಷಿಯ ಜೀವಂತ ಪಾಠಶಾಲೆಯಾಗಲಿದೆ.

ವಿಜ್ಞಾನಿಗಳ ಬದಲು ರೈತರ ಮಾತು: ಕೃಷಿಯ ಬಗ್ಗೆ ಮಾತನಾಡಲು ಸಾಮಾನ್ಯವಾಗಿ ತಜ್ಞರು, ವಿಜ್ಞಾನಿಗಳು ಅಥವಾ ಪ್ರಾಧ್ಯಾಪಕರನ್ನು ಆಹ್ವಾನಿಸಲಾಗುತ್ತದೆ. ಆದರೆ, ಈ ಬಾರಿ ಆ ಸಂಪ್ರದಾಯಕ್ಕೆ ಹೊಸ ತಿರುವು ನೀಡಲಾಗಿದೆ. ಹೊಲದಲ್ಲಿ ಪ್ರಯೋಗ ಮಾಡಿ ಫಲ ಕಂಡ ರೈತರೇ ಉಪನ್ಯಾಸಕರಾಗಲಿದ್ದಾರೆ. ಆಯ್ದ ಆರು ಮಂದಿ ಪ್ರಗತಿಪರ ರೈತರು ತಮ್ಮ ಕೃಷಿ ಬದುಕಿನ



ಅನುಭವ, ಯಶಸ್ಸು, ಸವಾಲು, ನಷ್ಟ-ಲಾಭ ಸೇರಿದಂತೆ ಕೃಷಿಯ ನೋವು-ನಲಿವುಗಳನ್ನು ಹಂಚಿಕೊಳ್ಳಲಿದ್ದಾರೆ. ಪುಸ್ತಕದಲ್ಲಿ ಓದಿದ ಪಾಠಕ್ಕಿಂತ ಹೊಲದಲ್ಲಿ ಕಂಡ ಅನುಭವ ರೈತರಿಗೆ ಹೆಚ್ಚು ಆಪ್ತವಾಗುಹುದು ಎಂಬ ಆಶಯ ಇದರ ಹಿಂದಿದೆ. ಇದರ ಜೊತೆಗೆ ಜಿಲ್ಲೆಯ 10 ಮಂದಿ ಪ್ರಗತಿಪರ ರೈತರನ್ನು ಸನ್ಮಾನಿಸಲಾಗುತ್ತದೆ.

ಡ್ರೋನ್‌ನಿಂದ ಹೊಲಕ್ಕೆ ಔಷಧಿ: ಕೃಷಿಯ ಆಧುನಿಕ ಮುಖವನ್ನು ಪರಿಚಯಿಸುವ ಪ್ರಯತ್ನವೂ ನಡೆಯಲಿದೆ. ಡ್ರೋನ್ ಬಳಸಿ ಬೆಳೆಗಳಿಗೆ ಔಷಧಿ ಸಿಂಪಡಿಸುವ ಪ್ರಾತ್ಯಕ್ಷಿಕೆ ರೈತರಿಗೆ ತಂತ್ರಜ್ಞಾನ ವನ್ನು ನೇರವಾಗಿ ಪರಿಚಯಿಸಲಿದೆ. ಇದರ ಜತೆಗೆ ಆಧುನಿಕ ಹೈನುಗಾರಿಕೆ, ಮೀನು ಸಾಕಣೆ, ರೇಷ್ಮೆ ಕೃಷಿ ಸೇರಿದಂತೆ ಸಮಗ್ರ ಕೃಷಿಯ ವಿವಿಧ ವಿಧಾನಗಳನ್ನು ಮಳಿಗೆಗಳು ಹಾಗೂ ಪ್ರಾತ್ಯಕ್ಷಿಕೆಗಳ ಮೂಲಕ ತಿಳಿಸಿಕೊಡಲಾಗುತ್ತದೆ. ಬರಗಾಲದ ಪರಿಸ್ಥಿತಿಯನ್ನು ಹೇಗೆ ನಿರ್ವಹಿಸಬಹುದು? ಕಡಿಮೆ ನೀರಿನಲ್ಲಿ ಯಾವ ಬೆಳೆಗಳನ್ನು ಬೆಳೆಯಬಹುದು? ಕಡಿಮೆ ಅವಧಿಯಲ್ಲಿ ಆದಾಯ ನೀಡುವ ಬೆಳೆಗಳು ಯಾವುವು? ಎಣ್ಣೆಕಾಳು ಬೆಳೆಗಳಿಗೆ ಇರುವ ಅವಕಾಶಗಳೇನು? ಇಂತಹ ಪ್ರಶ್ನೆಗಳಿಗೂ ರೈತ ದಸರೆ ಉತ್ತರ ಹುಡುಕಲಿದೆ.

ಜಾನುವಾರು ಲೋಕ: ರೈತ ದಸರೆಯ ಮಸ್ತುಪ್ರದರ್ಶನದಲ್ಲಿ ಕೃಷಿಯಷ್ಟೇ ಅಲ್ಲ, ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗವಾಗಿರುವ ಜಾನುವಾರುಗಳ ವೈವಿಧ್ಯವೂ ಅನಾವರಣಗೊಳ್ಳಲಿದೆ. ಚಿಕ್ಕ ಮುಖ, ಉದ್ದ ಕಿವಿಯ ಮೇಕೆಗಳು, ವಿಶಿಷ್ಟರುಚಿಯ ಮಾಂಸ ಹಾಗೂ ಉತ್ತಮ ಆದಾಯದ ಸಾಧ್ಯತೆಯಿಂದ ಗಮನ ಸೆಳೆಯುವ ಬಂಡೂರು ಕುರಿಗಳು, ಮೈಸೂರು ನಾಟಿ ಕೋಳಿ, ಗಿನಿ ಕೋಳಿ, ಖಿಡಕನಾಥ್, ಅಸೀಲ್, ಗೌಜಲಕ್ಕಿ ಸೇರಿದಂತೆ ವಿವಿಧ ಹಿತ್ತಲ ನಾಟಿ ಕೋಳಿಗಳ ಸಾಕಣೆ. ಇದರ ಜತೆಗೆ ನಾಟಿ ಹಸುಗಳ ವಿವಿಧ ತಳಿಗಳ ಪರಿಚಯವೂ ಇರಲಿದೆ. ನಾಟಿ ಹಸುಗಳನ್ನು ವೀಕ್ಷಿಸುವುದಷ್ಟೇ ಅಲ್ಲ, ಖರೀದಿಸುವ ಅವಕಾಶವೂ ರೈತರಿಗೆ ದೊರೆಯಲಿದೆ.

ಎತ್ತಿನ ಬಂಡಿಯಿಂದ ಅತ್ಯಾಧುನಿಕ ಯಂತ್ರದವರೆಗೆ: ರೈತ ದಸರೆಯ ಮೊದಲ ದಿನವೇ ಕೃಷಿ ಸಂಸ್ಕೃತಿಯ ಚಿತ್ರಣ ಮೂಡಲಿದೆ. ಅ.16ರಂದು ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಿಂದ ಮೆರವಣಿಗೆ ನಡೆಯಲಿದೆ. ಎತ್ತಿನ ಗಾಡಿಗಳು, ಆಧುನಿಕ ಕೃಷಿ ಯಂತ್ರೋಪಕರಣಗಳು, ವಿವಿಧ ತಳಿಯ ಜಾನುವಾರುಗಳು, ರೈತರು ಹಾಗೂ ಕಲಾವಿದರು ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ. ಒಂದೆಡೆ ಕೃಷಿಯ ಸಾಂಪ್ರದಾಯಿಕ ಮುಖ, ಮತ್ತೊಂದೆಡೆ ಆಧುನಿಕ ಯಂತ್ರೋಪಕರಣಗಳು. ಹಳೆಯ ಬೇರುಗಳೊಂದಿಗೆ ಹೊಸ ತಂತ್ರಜ್ಞಾನವನ್ನು ಜೋಡಿಸುವ ಪ್ರಯತ್ನದಂತೆ ಈ ಮೆರವಣಿಗೆ ರೂಪುಗೊಳ್ಳಲಿದೆ.

ಕಬ್ಬು ಹೊಲಕ್ಕೂ ಬರಲಿದೆ ಯಂತ್ರ: ಈ ಬಾರಿ ರೈತ ದಸರೆಯಲ್ಲಿ ಮತ್ತೊಂದು ಹೊಸ ಪ್ರಯೋಗದ ಪರಿಚಯವಾಗಲಿದೆ, ಕಬ್ಬು ಕಟಾವು ಮತ್ತು ನಾಟಿ ಯಂತ್ರ. ಮೈಸೂರು ಜಿಲ್ಲೆಯಲ್ಲಿ ಇಂತಹ ಯಂತ್ರಗಳ ಬಳಕೆ ಇನ್ನೂ ವ್ಯಾಪಕವಾಗಿಲ್ಲ. ಹೀಗಾಗಿ ಹೊರಗಿನಿಂದ ಯಂತ್ರಗಳನ್ನು ತರಿಸಿ ರೈತರಿಗೆ ಅದರ ಕಾರ್ಯ ವೈಖರಿಯನ್ನು ಪರಿಚಯಿಸಲು ಉದ್ದೇಶಿಸಲಾಗಿದೆ. ಕೃಷಿಯಲ್ಲಿ ಯಾಂತ್ರೀಕರಣದ ಅಗತ್ಯ, ಸಮಯ ಮತ್ತು ನೀರಿನ ಉಳಿತಾಯ, ಕಾರ್ಮಿಕರ ಕೊರತೆ ಸೇರಿದಂತೆ ರೈತರು ಎದುರಿಸುತ್ತಿರುವ ಹಲವು ಸಮಸ್ಯೆಗಳಿಗೆ ತಂತ್ರಜ್ಞಾನ ಹೇಗೆ ನೆರವಾಗಬಹುದು ಎಂಬುದನ್ನು ಪ್ರಾತ್ಯಕ್ಷಿಕೆ ಮೂಲಕ ತೋರಿಸಲಾಗುತ್ತದೆ.

ಆದಾಯ ತರುವ ಹಿತ್ತಲು: ನಾಟಿ ಕೋಳಿಗಳ ಸಾಕಣೆಯೂ ರೈತ ದಸರೆಯ ಪ್ರಮುಖ ಆಕರ್ಷಣೆಯಾಗಲಿದೆ. ಮೈಸೂರು ನಾಟಿ ಕೋಳಿ, ಗಿನಿ ಕೋಳಿ, ಖಿಡಕನಾಥ್, ಅಸೀಲ್, ಗೌಜಲಕ್ಕಿ ಸೇರಿದಂತೆ ವಿವಿಧ ಸುಧಾರಿತ ಹಿತ್ತಲ ನಾಟಿ ಕೋಳಿಗಳ ಸಾಕಣೆ ಕುರಿತು ಪ್ರಾತ್ಯಕ್ಷಿಕೆ ನಡೆಯಲಿದೆ. ಸಣ್ಣ ಪ್ರಮಾಣದ ಪಶುಪಾಲನೆ ಹಾಗೂ ಕೋಳಿ ಸಾಕಣೆಯನ್ನು ಹೆಚ್ಚುವರಿ ಆದಾಯದ ಮೂಲವನ್ನಾಗಿ ಮಾಡಿಕೊಳ್ಳುಲು ಬಯಸುವ ರೈತರಿಗೆ ಇದು ಉಪಯುಕ್ತವಾಗಲಿದೆ.

ರೈತನಿಗಾಗಿ ರೈತ ದಸರಾ: ರೈತ ದಸರಾ ಕೇವಲ ಪ್ರದರ್ಶನಕ್ಕೆ ಸೀಮಿತವಾಗಿಲ್ಲ. ರೈತರನ್ನು ಕಾರ್ಯಕ್ರಮದ ಭಾಗವಾಗಿಸುವ ಪ್ರಯತ್ನವೂ ನಡೆದಿದೆ. ಆತ್ಮ ಯೋಜನೆಯಡಿ ಮೈಸೂರು ಜಿಲ್ಲೆಯ ಏಳು ತಾಲೂಕುಗಳಿಂದ ಆಯ್ದ ರೈತರನ್ನು ಏಳು ಬಸ್‌ಗಳಲ್ಲಿ ರೈತ ದಸರೆಗೆ ಕರೆತರಲು ಯೋಜಿಸಲಾಗಿದೆ. ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ ಮತ್ತು ಮೀನುಗಾರಿಕೆ ಇಲಾಖೆಗಳು ಹಾಗೂ ಕೃಷಿ-ತೋಟಗಾರಿಕೆ ಕಾಲೇಜುಗಳ ಮಳಿಗೆಗಳು ರೈತರಿಗೆ ಸಮಗ್ರ ಕೃಷಿಯ ಮಾಹಿತಿ ಒದಗಿಸಲಿವೆ.

ಯಂತ್ರದಿಂದ ಹಾಲು ಕರೆಯುವ ಸ್ಪರ್ಧೆ

ರೈತ ದಸರೆಯ ಮತ್ತೊಂದು ಕುತೂಹಲದ ಕಾರ್ಯಕ್ರಮ ಹಾಲು ಕರೆಯುವ ರಾಜ್ಯಮಟ್ಟದ ಸ್ಪರ್ಧೆ. ಅ.17ರಂದು ನಡೆಯಲಿರುವ ಈ ಸ್ಪರ್ಧೆಯಲ್ಲಿ ಈ ಬಾರಿ ವಿಶೇಷ ಅವಕಾಶವೊಂದು ಸಿಗಲಿದೆ. ಇದುವರೆಗೆ ಕೈಯಿಂದ ಹಾಲು ಕರೆಯುವುದಕ್ಕೆ ಮಾತ್ರ ಅವಕಾಶವಿತ್ತು. ಆದರೆ, ಈಗ ಯಂತ್ರ ಬಳಸಿ ಹಾಲು ಕರೆಯಲೂ ಅವಕಾಶ ನೀಡಲಾಗಿದೆ. ಕೃಷಿ ಮತ್ತು ಹೈನುಗಾರಿಕೆ ಕ್ಷೇತ್ರದಲ್ಲಿ ತಂತ್ರಜ್ಞಾನ ಹೇಗೆ ಬದಲಾಗುತ್ತಿದೆ ಎಂಬುದಕ್ಕೆ ಈ ಸ್ಪರ್ಧೆಯೇ ಒಂದು ಸಣ್ಣ ಕನ್ನಡಿ.

ಅ.18ರಂದು ಮುದ್ದು ಪ್ರಾಣಿಗಳ ಮೇಳ

ರೈತ ದಸರೆಗೆ ಅ.18ರಂದು ಮತ್ತೊಂದು ಬಣ್ಣ ಸೇರ್ಪಡೆಯಾಗಲಿದೆ. ವಿವಿಧ ತಳಿಯ ಶ್ವಾನಗಳು ಸೇರಿದಂತೆ ಮುದ್ದು ಪ್ರಾಣಿಗಳ ಪ್ರದರ್ಶನ ನಡೆಯಲಿದ್ದು, ಪ್ರಾಣಿಪ್ರಿಯರಿಗೆ ವೈವಿಧ್ಯಮಯ ತಳಿಗಳನ್ನು ಕಣ್ತುಂಬಿಕೊಳ್ಳುವ ಅವಕಾಶ ದೊರೆಯಲಿದೆ.

Hosadiganta pg 08

ಹಾಡೋನಹಳ್ಳಿಯಲ್ಲಿ ಕೃಷಿ ವಿಜ್ಞಾನ ಕೇಂದ್ರ । ಮಣ್ಣು ಮತ್ತು ನೀರು ಪ್ರಯೋಗಾಲಯಕ್ಕೆ ಮಾನ್ಯತೆ

ವೈಜ್ಞಾನಿಕ ಕೃಷಿಯಿಂದ ಮಣ್ಣಿನ ಆರೋಗ್ಯ

• **ದೊಡ್ಡಬಳ್ಳಾಪುರ:** ಮಣ್ಣಿನ ಆರೋಗ್ಯ ಮತ್ತು ನೀರಿನ ಗುಣಮಟ್ಟವನ್ನು ವೈಜ್ಞಾನಿಕವಾಗಿ ಅರಿತು ಅದರ ಆಧಾರದ ಮೇಲೆ ಸೂಕ್ತ ನಿರ್ವಹಣಾ ಕ್ರಮ ಕೈಗೊಳ್ಳುವುದು ಅತ್ಯಂತ ಅವಶ್ಯಕ ಎಂದು ಕೃಷಿ ವಿಜ್ಞಾನ ಕೇಂದ್ರದ ಪ್ರಭಾರ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥ ಡಾ.ಈಶ್ವರಪ್ಪ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ರೈತರಿಗೆ ವೈಜ್ಞಾನಿಕ ಮತ್ತು ವಿಶ್ವಾಸಾರ್ಹ ಪರೀಕ್ಷಾ ಸೇವೆ ಒದಗಿಸುವಲ್ಲಿ ಕೃಷಿ ವಿಜ್ಞಾನ ಕೇಂದ್ರದ ಮಣ್ಣು ಮತ್ತು ನೀರು ಪರೀಕ್ಷಾ ಪ್ರಯೋಗಾಲಯ ಮಹತ್ವದ ಪಾತ್ರ ವಹಿಸುತ್ತಿದೆಯೆಂದು ತಿಳಿಸಿದರು.

ಮೌಲ್ಯಮಾಪನ: ದೇಶದ ಪರೀಕ್ಷಾ ಮತ್ತು ಮಾಪನ ಪ್ರಯೋಗಾಲಯಗಳ ತಾಂತ್ರಿಕ ಸಾಮರ್ಥ್ಯವನ್ನು ಮೌಲ್ಯ ಮಾಪನ ಮಾಡುವ ರಾಷ್ಟ್ರೀಯ ಮಾನ್ಯತಾ ಸಂಸ್ಥೆಯಾಗಿದೆ. ಪರೀಕ್ಷಾ ಪ್ರಯೋಗಾಲಯಗಳಿಗೆ ಐಎಸ್‌ಒ, ಇಐಸಿ/17025 ಮಾನದಂಡದ ಆಧಾರದ ಮೇಲೆ ಮಾನ್ಯತೆ ನೀಡಲಾಗುತ್ತದೆ.

ಈ ಮಾನ್ಯತೆ ನಿರ್ದಿಷ್ಟ ಪರೀಕ್ಷೆಗಳನ್ನು ನಿಗದಿತ ಗುಣಮಟ್ಟದ ವ್ಯವಸ್ಥೆ, ತಾಂತ್ರಿಕ ಸಾಮರ್ಥ್ಯ, ವಿಶ್ವಾಸಾರ್ಹ ವಿಧಾನಗಳೊಂದಿಗೆ



ನಡೆಸುವ ಪ್ರಯೋಗಾಲಯದ ಸಾಮರ್ಥ್ಯಕ್ಕೆ ಅಂಕಿತ ಮಾನ್ಯತೆ ಒದಗಿಸುತ್ತದೆ ಎಂದು ಹೇಳಿದರು.

ವಿಶ್ವಾಸಾರ್ಹ ಹೆಜ್ಜೆ

ಮಣ್ಣು ಮತ್ತು ನೀರಿನ ಪರೀಕ್ಷೆಯಲ್ಲಿ ವಿಶ್ವಾಸಾರ್ಹ ಹೆಜ್ಜೆಯಾಗಿದೆ. ಕೃಷಿಯ ಯಶಸ್ಸಿಗೆ ಗುಣಮಟ್ಟದ ಬೀಜ, ಸಮರ್ಪಕ ನೀರಾವರಿ ಮತ್ತು ಸುಧಾರಿತ ಕೃಷಿ ಪದ್ಧತಿಗಳಷ್ಟೇ ಸಾಕಾಗುವುದಿಲ್ಲ ಎಂದು ಡಾ. ಈಶ್ವರ್ ಹೇಳಿದರು.

ನೀರು ಪರೀಕ್ಷಿಸಿ ಕೃಷಿ ಮಾಡಿ

ಕೃಷಿ ಕ್ಷೇತ್ರದಲ್ಲಿ ಮಣ್ಣು ತೀದು ಬೆಳೆ ಬೆಳೆಸಿ, ನೀರು ಪರೀಕ್ಷಿಸಿ ಕೃಷಿ ಮಾಡಿ ಎಂಬ ವೈಜ್ಞಾನಿಕ ಮನೋಭಾವ ರೈತರಲ್ಲಿ ಬೆಳೆಸುವುದು ಇಂದಿನ ಅಗತ್ಯವೆಂದು ಮಣ್ಣು ವಿಜ್ಞಾನಿ ಡಾ.ಡಿ. ಬಾಲಾಜಿ ನಾಯ್ಕ ತಿಳಿಸಿದರು.

ಎಸ್‌ಎಬಿಎಲ್ ಮಾನ್ಯತೆ ಏಕೆ ಅಗತ್ಯ: ಮಣ್ಣು ನೀರಿನ ಪರೀಕ್ಷೆಯ ಫಲಿತಾಂಶ ರೈತರ ಕೃಷಿ ನಿರ್ಧಾರಗಳಿಗೆ ನೇರವಾಗಿ ಸಂಬಂಧ ಹೊಂದಿವೆ. ಮಣ್ಣಿನಲ್ಲಿರುವ ಪೋಷಕಾಂಶಗಳ ಪ್ರಮಾಣ, ಮಣ್ಣಿನ ರಸಸಾರ, ವಿದ್ಯುತ್ ವಾಹಕತೆ, ಸಾವಯವ ಇಂಗಾಲ ಇತರೆ ಸುಮಾರು 16 (ಪ್ರಾಥಮಿಕ, ದ್ವಿತೀಯ ಮತ್ತು ಲಘುಪೋಷಕಾಂಶ) ಪ್ರಮುಖ ಗುಣಲಕ್ಷಣಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸುವುದರಿಂದ ಬೆಳೆ, ಮಣ್ಣಿಗೆ ಅನುಗುಣವಾದ ಪೋಷಕಾಂಶ ನಿರ್ವಹಣಾ ಕ್ರಮ ರೂಪಿಸಲು ನೆರವಾಗುತ್ತದೆಂದರು. ಅದೇ ರೀತಿ ನೀರಿನಲ್ಲಿನ ನೀರಿನ ರಸಸಾರ (ಪಿ.ಎಚ್), ನೀರಿನ ವಿದ್ಯುತ್ ವಾಹಕತೆ (ಇಸಿ) ಹಾಗೂ ಇತರ ಸುಮಾರು 12 ಪ್ರಮುಖ ಗುಣಲಕ್ಷಣ ವಿಶ್ಲೇಷಿಸಿ ನೀರಿನ ಗುಣಮಟ್ಟದ ಕುರಿತು ಪರೀಕ್ಷಿಸುವುದರಿಂದ ನೀರಾವರಿಗೆ ನೀರು ಸೂಕ್ತವಾಗಿದೆಯೇ, ನೀರಿನಲ್ಲಿರುವ ವಿವಿಧ ರಾಸಾಯನಿಕ ಗುಣಲಕ್ಷಣ ಕೃಷಿ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳು ಸಹಾಯವಾಗುತ್ತದೆ ಎಂದು ತಿಳಿಸಿದರು.

ಇದುವರೆಗೂ ಕೃಷಿ ವಿಜ್ಞಾನ ಕೇಂದ್ರದ ಮಣ್ಣು ಮತ್ತು ನೀರು ಪರೀಕ್ಷಾ ಪ್ರಯೋಗಾಲಯದ ಮೂಲಕ ಇದುವರೆಗೂ ರೈತರು, ವಿವಿಧ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ 10825 ಮಣ್ಣು ಮಾದರಿ ಹಾಗೂ 7939 ನೀರು ಮಾದರಿಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಲಾಗಿದೆ.

The dahlia lovers of Malnad

Across villages in Uttara Kannada and Shivamogga districts, women are growing dahlia, sharing varieties and nurturing a passion for theflower, writes Ganesh Hegde Neelesara



Hundreds of women in the Malnad region grow dahlias every monsoon. In pic, Archana, a lecturer, tends to the dahlia garden in her home garden at Mungaravalli in Shivamogga district. PHOTO/SHREE PADRE

As the rainy season draws to a close, Jayalakshmi Hegde is busy tending to her dahlia plants. An avid florist from Nanikatta-Kalagadde, a remote village near Sirsi, she has been growing dahlias for nearly three decades. Planted just before the rains, the stalks have turned the surroundings of her home into a riot of dahlias in dazzling colours, patterns, sizes and shapes.

Jayalakshmi is not alone. Thousands of women across Sirsi, Siddapur and Yellapur taluks of Uttara Kannada district, and Sagar in Shivamogga district share her passion for the flower, locally known as Dere hoo.

"At least 250 women in Sirsi area grow around 50 varieties of dahlias every year," says Anjana Bhat, one of the organisers of the Dere Mela, an annual dahlia exhibition held in Sirsi for the past 15 years.

The mela brings together dahlia growers for the display and sale of plants, while also giving them an opportunity to exchange varieties and information.

For years, the women of the region grew dahlia out of passion and love for the flower, despite the considerable time and money involved in maintaining the plants. Now, that passion has slowly opened up small income opportunities for some growers.

Vanita Bhat Kalgar Oddu, a homemaker and dahlia grower from a village near Sirsi, now sells dahlia offsets — tender shoots that emerge from the eye of a tuber — for Rs 30 to Rs 80 each. Her garden has about 100 cultivars or distinct varieties.

Hanumantappa Madlur, a farmer from Banavasi, has found a market for dahlia flowers. Depending on their size and colour, the flowers are priced at Rs 2 to Rs 10 per piece.

He lives close to the famous Madhukeshwar temple in Banavasi, where devotees buy flowers in large numbers. However, few growers sell dahlia flowers commercially, largely due to their poor shelf life.

A flower with a long history

Dahlias are bushy, tuberous perennial plants native to Central America. After the Spanish conquest in the 16th century, the plants were introduced to other parts of the world. They belong to the same family as the sunflower, daisy, chrysanthemum and zinnia. There are 49 species of dahlia and more than 20,000 registered cultivars, differing in colour, form and size.

Popular flower

Jayalakshmi began growing dahlia as a passion. "Until recently, the flower added to the beauty of my surroundings and was also used for worship. Since the last couple of years, there has been an increased demand for offsets," she says.

She has also explored selling offsets online, with some success. Many buyers still come directly to her home to purchase tubers or offsets.

Dahlia tubers are generally planted in raised beds made of soil mixed with areca husk and adequate farmyard manure, just before the rains begin. Weeding and mulching are carried out regularly. As the plant grows, it needs a stalk to support it.

September is usually the peak flowering month. Flowering can continue through October if the rains continue. At the end of the season, the tubers are taken out, dried and stored in a cool, dark place for the next season. Dahlia can be propagated through seeds, lateral shoots, tubers and offsets.

Dahlia exhibitions

With more women showing interest in growing dahlia, the exhibition in Sirsi held in July attracted hundreds of enthusiasts. For many, the mela became a place to discover new varieties and begin their own flower gardens.

"We are exploring the possibility of dahlia flower enthusiasts visiting the homes of gardeners after paying a visiting fee. They can interact with the growers, enjoy the flower gardens and purchase plants," says Shailaja Gornamane, one of the organisers of the exhibition.

A team of agricultural scientists recently visited the area to explore the possibilities of year-round cultivation, value addition, improved cultivation practices and better marketing channels. Other popular flowers grown in this region during the rainy and winter seasons include balsam, chrysanthemum, marigold, crossandra, rose and zinnia. During the season, a number of households grow at least five varieties of balsam and chrysanthemum.

Dec Hrd Pg 02

Leh opens world's highest twin flower fields to tourists

The new fields at Choglamsar and Stakna offer visitors a colourful addition to their Leh itinerary...

ALWIN BENJAMIN SOJI

VISITORS to Leh have a new attraction to add to their itinerary with the opening of the world's highest-altitude twin flower fields at Choglamsar and Stakna. Located at an elevation of 10,600 feet, the fields opened to the public on September 18.

Spread across 40 acres, the two fields feature more than 25 lakh flowers, including around 24 lakh *lilium* and one lakh *gladiolus*. The project has been developed as a high-altitude floriculture initiative, introducing commercial flower cultivation to a region better known for its stark mountain landscapes and beautiful cold desert terrain.

The fields were inaugurated by Ladakh Lieutenant Governor Vinai Kumar Saxena on September 17. According to the Ladakh administration, they are the highest flower fields in the world and also the highest and largest in India.

The Choglamsar field was developed in about two months, with plantation beginning on July 16. Its first blooms appeared in the first week of September. At Stakna, nearly 14 lakh *lilium* were planted in August, with the first blooms expected around the end of October.

Beyond being a visitor attraction, the project is intended to promote floriculture as an alternative source of income for farmers in Ladakh. The *Agriculture Department* is providing local farmers with training in scientific cultivation, modern farming techniques and post-harvest management.

The fields are also planned as training and demonstration centres for farmers and young people. In the first year, the *Agriculture Department* will oversee cultivation before handing the fields over to selected self-help groups and cooperatives for commercial cultivation.

The flower garden at Choglamsar will be open to tourists and residents for an entry fee of ₹25 for adults and ₹10 for children, with the revenue being used for its maintenance.







Ind Exp Pg 09

5 ವರ್ಷದಲ್ಲಿ ರೈತರ ಬೆಳೆ ಸಾಲ ಶೇ.45ರಷ್ಟು ಏರಿಕೆ!

2022-23ರಲ್ಲಿ 97,994 ಕೋಟಿ ರೂ. ಇದ್ದ ಸಾಲ ಈ ವರ್ಷ 1.42 ಲಕ್ಷ ಕೋಟಿಗೆ ಹೆಚ್ಚಳ

■ ನರಸಿಂಹರಾವ್

ಸಂ.ಕ.ಸಮಾಚಾರ, ಬೆಂಗಳೂರು

ರಾಜ್ಯದಲ್ಲಿನ ರಾಷ್ಟ್ರೀಕೃತ, ವಾಣಿಜ್ಯ ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ರೈತರಿಗೆ ವಿತರಿಸುತ್ತಿರುವ ಬೆಳೆ ಸಾಲದ ಪ್ರಮಾಣದಲ್ಲಿ ಕಳೆದ ಐದು ವರ್ಷಗಳಲ್ಲಿ ಶೇ.45ರಷ್ಟು ಹೆಚ್ಚಾಗಿದೆ. ಕಳೆದ 2022-23 ರಲ್ಲಿ ರಾಜ್ಯದ 60 ಲಕ್ಷಕ್ಕೂ ಹೆಚ್ಚು ರೈತರಿಗೆ ಸುಮಾರು 97,994 ಕೋಟಿ ರೂ ಬೆಳೆಸಾಲ ವಿತರಿಸಲಾಗಿತ್ತು. ಆದರೆ 2026-27ರ ಸಾಲಿನಲ್ಲಿ ಇದುವರೆಗೆ 75 ಲಕ್ಷಕ್ಕೂ ಹೆಚ್ಚು ಜನರಿಗೆ 1.42 ಲಕ್ಷ ಕೋಟಿ ರೂ ಸಾಲ ವಿತರಿಸಲಾಗಿದೆ ಎಂದು ರಾಜ್ಯ ಮಟ್ಟದ ಬ್ಯಾಂಕರ್ ಸಮಿತಿ ಹೇಳಿದೆ. ಪುಟ 10



ರೈತರ ಸ್ಥಿತಿ ಅಧೋಗತಿ

ರೈತರನ್ನು ಸಾಲದ ಕೂಪದಲ್ಲಿ ನೂಕುವ ತಂತ್ರ

ಸಾಲಕೊಟ್ಟು ಸಣ್ಣ ಹಿಡುವಳಿದಾರರ ಭೂಮಿಯನ್ನು ತೆಗೆದುಕೊಂಡು ಅದನ್ನು ದೊಡ್ಡ ಹಿಡುವಳಿದಾರರಿಗೆ ಕೊಡುವ ಹುನ್ನಾರ ಸಡೆದಿದೆ. ರೈತರ ಪರಿಸ್ಥಿತಿ ತೀರ ಅಧೋಗತಿಗೆ ಇಳಿಯುವುದರಲ್ಲಿ ಸಂಶಯವೇ ಇಲ್ಲ.

■ ಪಾಮರಸ ಮಾಲಪಾಣಿ, ರಾಜ್ಯ ರೈತರ ಸಂಘದ ಗೌರವಾಧ್ಯಕ್ಷ

ಬರಗಾಲದ ಹೊಡೆತ: ಸಾಲ ಪಡೆವ ರೈತರ ಸಂಖ್ಯೆ ಇಳಿಕೆ

2025-26ರಲ್ಲಿ 88 ಲಕ್ಷ ರೈತರಿಗೆ 1.40 ಲಕ್ಷ ಕೋಟಿ ಬೆಳೆ ಸಾಲ ವಿತರಿಸಲಾಗಿತ್ತು. ಈ ವರ್ಷ ಇದುವರೆಗೆ 75 ಲಕ್ಷ ರೈತರಿಗೆ ಮಾತ್ರ ಸಾಲ ವಿತರಣೆಯಾಗಿದ್ದು, ಬರ ಪರಿಸ್ಥಿತಿಯಿಂದ ಸಾಲ ಪಡೆಯುವ ರೈತರ ಸಂಖ್ಯೆಯಲ್ಲಿ ಇಳಿಕೆಯಾಗಿದೆ ಎಂದು ಮೂಲಗಳು ತಿಳಿಸಿವೆ. ಹಳೆಯ ಸಾಲಗಳ ನವೀಕರಣ ಹಾಗೂ ಸಾಲದ ಪ್ರಮಾಣ ಹೆಚ್ಚಳದಿಂದ ಒಟ್ಟು ವಿತರಿತ ಸಾಲದ ಮೊತ್ತ ಹೆಚ್ಚಾಗಿದೆ ಎಂಬ ಅಭಿಪ್ರಾಯವೂ ಇದೆ. ಕರ್ನಾಟಕದಲ್ಲಿ ಅತಿ ಹೆಚ್ಚು ಬೆಳೆ ಸಾಲ ವಿತರಿಸುವ ಬ್ಯಾಂಕ್ ಆಗಿ ಕೆನರಾ ಮುಂದಿದೆ.

5 ವರ್ಷದಲ್ಲಿ ರೈತರ ಬೆಳೆ ಸಾಲ 45% ಏರಿಕೆ!

ಮೊದಲ ಪುಟದಿಂದ...

ತಜ್ಞರ ಪ್ರಕಾರ ಬೆಳೆಸಾಲದ ಪ್ರಮಾಣ ಹೆಚ್ಚಾಗಲು ಎರಡು ಪ್ರಮುಖ ಕಾರಣಗಳು ಇವೆ. ಖಾಸಗಿ ಲೇವಾದೇವಿದಾರರಿಂದ ರೈತರು ಬ್ಯಾಂಕುಗಳತ್ತ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವುದು ಇನ್ನೊಂದು ಕೃಷಿ ಉತ್ಪಾದನಾ ವೆಚ್ಚ ಬೇಕಾಬಿಟ್ಟಿ ಹೆಚ್ಚಾಗಿರುವುದು. ಕಳೆದ ಐದು ವರ್ಷಗಳಲ್ಲಿ ಬಿತ್ತನೆ ಬೀಜ, ರಸಗೊಬ್ಬರ, ಕೃಷಿ ಕಾರ್ಮಿಕರ ವೆಚ್ಚ ಶೇ 30 ರಷ್ಟು ಹೆಚ್ಚಾಗಿದೆ. ಇದರಿಂದಾಗಿ ರೈತರು ಅನಿವಾರ್ಯವಾಗಿ ಸಾಲ ಪಡೆಯಬೇಕಾಗಿದೆ. ಖಾಸಗಿ ಲೇವಾದೇವಿದಾರರು ಹೆಚ್ಚಿನ ಬಡ್ಡಿದರ ಪಡೆಯುತ್ತಿರುವುದು ಹಾಗೂ ಸಾಲ ವಸೂಲಾತಿ ಸಂದರ್ಭದಲ್ಲಿ ಕಿರುಕುಳದ ಆರೋಪಗಳಿಂದಾಗಿ ಅನೇಕ ರೈತರು ಬ್ಯಾಂಕ್‌ಗಳತ್ತ ಮುಖ ಮಾಡುತ್ತಿದ್ದಾರೆ.

ಬ್ಯಾಂಕುಗಳಿಂದ ಸಾಲ ಪಡೆಯುವುದೂ ಅಷ್ಟು ಸುಲಭವಲ್ಲ. ಬ್ಯಾಂಕುಗಳು ಕೇಳುವ ಕೆಲವೊಂದು ದಾಖಲಾತಿಗಳು ಭದ್ರತೆ, ಹಿಂದಿನ ಸಾಲದ ದಾಖಲೆ ಮುಟ್ಟಿಸಿರುವ ಪ್ರಮಾಣ ಪತ್ರಗಳನ್ನು ಕೇಳುತ್ತವೆ. ಇಂತಹ ಸಂದರ್ಭದಲ್ಲಿ ರೈತರಿಗೆ ಕೆಲವೊಂದು ದಾಖಲೆಗಳನ್ನು ಒದಗಿಸಲು ಆಗುವುದಿಲ್ಲ. ಇಂತಹ ಸಂದರ್ಭದಲ್ಲಿ ಮಧ್ಯವರ್ತಿಗಳ ಮೊರೆ ಹೋಗುವ ಅನಿವಾರ್ಯ ಎದುರಾಗುತ್ತದೆ.

ಆದರೆ ಅವರು ಸಾಲದ ಮೊತ್ತದಲ್ಲಿ ನಿರ್ದಿಷ್ಟ ಪ್ರಮಾಣದ ಹಣ ಪಡೆಯುತ್ತಾರೆ ಎಂದು ರೈತರು ಆರೋಪಿಸಿದ್ದಾರೆ.ಮತ್ತೊಂದೆಡೆ, ಬ್ಯಾಂಕ್‌ಗಳ ಸಾಲ ವಸೂಲಾತಿ ಏಜೆಂಟರ ಕಿರುಕುಳವೂ ರೈತರಿಗೆ ಸಮಸ್ಯೆಯಾಗಿದೆ. ಬೆಳೆ ನಷ್ಟವಾದರೂ ಸಾಲ ಮರುಪಾವತಿಗೆ ಒತ್ತಡ ಹಾಕಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ.

ಬರಪೀಡಿತ ಪ್ರದೇಶಗಳ ರೈತರಿಗೆ ಅನುಕೂಲವಾಗಲು ರಾಜ್ಯದ 101 ತಾಲೂಕುಗಳಲ್ಲಿ ಸಾಲ ಮರುಪಾವತಿಗೆ 12 ತಿಂಗಳ ಕಾಲಾವಕಾಶ ನೀಡಲಾಗಿದೆ. ಮಧ್ಯಮವಾಗಿ ಬಾಧಿತವಾದ ತಾಲೂಕುಗಳಲ್ಲಿ ಮರುಪಾವತಿ ಅವಧಿಯನ್ನು 36 ತಿಂಗಳುಗಳವರೆಗೆ ಹಾಗೂ ತೀವ್ರವಾಗಿ ಬಾಧಿತವಾದ ತಾಲೂಕುಗಳಲ್ಲಿ 60 ತಿಂಗಳುಗಳವರೆಗೆ (5 ವರ್ಷ) ವಿಸ್ತರಿಸಲಾಗಿದೆ.

ಯಾವ ಜಿಲ್ಲೆಯಲ್ಲಿ ಎಷ್ಟು ಸಾಲ

ಜಿಲ್ಲೆ	ರೈತರ ಸಂಖ್ಯೆ	ಬೆಳೆ ಸಾಲ
ಬೆಳಗಾವಿ	7.90 ಲಕ್ಷ	9,500 ಕೋಟಿ
ಮೈಸೂರು	4.62 ಲಕ್ಷ	9,400 ಕೋಟಿ
ಮಂಡ್ಯ	4.95 ಲಕ್ಷ	8,000 ಕೋಟಿ
ಹಾಸನ	4.88 ಲಕ್ಷ	7,800 ಕೋಟಿ
ಬೆಂಗಳೂರು	1.67 ಲಕ್ಷ	7,500 ಕೋಟಿ
ತುಮಕೂರು	3.98 ಲಕ್ಷ	7,000 ಕೋಟಿ

S-karnataka Pg 01